# ಕೋಡಿಂಬಾಡಿ ರೈ ಎಸ್ಟೇಟ್‌ನಲ್ಲಿ

(1ನೇ ಪುಟದಿಂದ)



## ಜನಸಂಘದ ಸ್ಥಾಪಕ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರ ಜನ್ಮಶತಾಬ್ಧಿ ಅಂಗವಾಗಿ ಭಾರತ್ ಮಾತಾ ಪೂಜನಾ ಕಾರ್ಯಕ್ರಮ

**ಜನಸಂಘದ ಸ್ಥಾಪಕ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರವರ ಜನ್ಮ ಶತಾಬ್ದಿಯ ಹಿನ್ನೆಲೆಯಲ್ಲಿ ಕೋಡಿಂಬಾಡಿ ರೈ ಎಸ್ಟೇಟ್‌ನ ವಸ್ತ್ರದಾನ ಕಾರ್ಯಕ್ರಮದೊಂದಿಗೆ ಭಾರತ್ ಮಾತಾ ಪೂಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರತೀ ವರ್ಷ ದೀಪಾವಳಿಯಂದು ವಸ್ತ್ರದಾನ ನಡೆಸಲಾಗುತ್ತಿದ್ದು ಈ ವರ್ಷ ದೀನ್‌ದಯಾಳ್ ಉಪಾಧ್ಯಾಯರವರ ಸಂದೇಶಗಳನ್ನು ಸಾರುವ ನಿಟ್ಟಿನಲ್ಲಿ ಭಾರತ್ ಮಾತಾ ಪೂಜನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ವೇದಿಕೆಯ ಬಲ ಬದಿಯಲ್ಲಿ ಭಾರತ ಮಾತೆಯ ಭಾವಚಿತ್ರವನ್ನು ಇರಿಸಿ ಪುಷ್ಪಾರ್ಚನೆ ಮಾಡಲಾಯಿತು. ದ.ಕ. ಜಿಲ್ಲಾ ಬಿಜೆಪಿ ಕಾರ್ಯಕಾರಿಣಿಯ ಸದಸ್ಯರೂ ಆಗಿರುವ ಅಶೋಕ್ ರೈಯವರ ತಾಯಿ ಗಿರಿಜಾ ಎಸ್.ರೈ ಯವರು ಪುಷ್ಪಾರ್ಚನೆಗೈಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಸಭಾಂಗಣದಲ್ಲಿ ಭಗವಾಧ್ವಜ ಮತ್ತು ಭಾರತೀಯ ಜನತಾ ಪಾರ್ಟಿಯ ಧ್ವಜ ಹಾಕಲಾಗಿತ್ತು. ಸಮಾಜದ ಕಟ್ಟಕಡೆಯ ವ್ಯಕ್ತಿಯ ನೋವಿಗೂ ಸ್ಪಂದಿಸಬೇಕೆನ್ನುವುದು ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಧ್ಯೇಯವಾಗಿತ್ತು. ಅವರ ತತ್ತ್ವಾದರ್ಶಗಳನ್ನು ಅಳವಡಿಸಿಕೊಂಡು ಟ್ರಸ್ಟ್‌ನ ಮೂಲಕ ನಾವು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದೇವೆ. ಆತ್ಮ ಶುದ್ಧಿಯಿಂದ ಬಡವರ ಸೇವೆ ಮಾಡಿದಾಗ ಸಂತೃಪ್ತಿಯ ಜೀವನ ನಮ್ಮದಾಗಲು ಸಾಧ್ಯವಿದೆ. ಸಮಾಜ ಸೇವೆಯನ್ನು ಮಾಡುತ್ತಿರುವುದು ಯಾವುದೇ ಆಡಂಬರಕ್ಕಲ್ಲ, ನಮ್ಮ ಮನೋತೃಪ್ತಿಗಾಗಿ. ಈ ಸಮಾಜದ ಋಣ ನನ್ನ ಮೇಲಿದೆ, ಆದ್ದರಿಂದ ಸಮಾಜದಿಂದ ಗಳಿಸಿದರಲ್ಲಿ ಒಂದಿಷ್ಟನ್ನು ಸಮಾಜಕ್ಕೆ ದಾನ ಮಾಡುತ್ತಿದ್ದೇನೆ. ಈ ಮೂಲಕ ಬದುಕಿನಲ್ಲಿ ಸಂತೋಷ ಕಾಣುತ್ತಿದ್ದೇನೆ. ಇವತ್ತು ಒಂದೆಡೆ ದೀಪಾವಳಿಯ ಸಂಭ್ರಮವಾದರೆ, ಇನ್ನೊಂದೆಡೆ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರವರ ಜನ್ಮಶತಾಬ್ದಿಯ ವರ್ಷ ಕೂಡಾ. ಆದ್ದರಿಂದ ಇಂದು ನೀಡಿರುವ ದಾನ ಹಿಂದಿನದಕ್ಕಿಂತಲೂ ಮಹತ್ವ ಪಡೆದಿದೆ ಎಂದು ಅಶೋಕ್ ರೈ ಈ ಸಂದರ್ಭದಲ್ಲಿ ಹೇಳಿದರು.**

ಕರಿಯೊಂದಿಗೆ ಇಡ್ಲಿಯ ಉಪಹಾರ ನೀಡಲಾಗಿತ್ತು. ಅಶೋಕ್ ರೈ ಮತ್ತು ಅವರ ಸಹೋದರರಾದ ಸುಬ್ರಹ್ಮಣ್ಯ ರೈ ಹಾಗೂ ರಾಜ್‌ಕುಮಾರ್ ರೈಯವರು ಉದ್ಯಮ ಕ್ಷೇತ್ರದ ಸಾಧಕರಾಗಿ ಕೋಟಿಪತಿಗಳಾಗಿ ಗುರುತಿಸಿಕೊಂಡಿದ್ದರೂ ಅವರು ಮತ್ತು ಅವರ ಮನೆಯವರು ಅತ್ಯಂತ ಸರಳತೆಯಿಂದ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ಮತ್ತು ಸಮಾಜದ ತಳಮಟ್ಟದಲ್ಲಿರುವ ಕಟ್ಟೆಕಡೆಯ ವ್ಯಕ್ತಿಗಳೊಂದಿಗೂ ಆತ್ಮೀಯತೆಯಿಂದ ಬೆರೆಯುತ್ತಿರುವುದು ಮಂಗಳೂರು ಸಹಿತ ವಿವಿದಡೆಯಿಂದ ಆಗಮಿಸಿದ್ದ ಟಿ. ವಿ ಹಾಗೂ ಪತ್ರಿಕಾ ಮಾಧ್ಯಮದ ಪ್ರತಿನಿಧಿಗಳ ಮೆಚ್ಚುಗೆಗೆ ಕಾರಣವಾಯಿತು.

**ಜನರ ಸೇವೆ ಮಾಡಲು ಸದಾ ಸಿದ್ಧ-ಅಶೋಕ್ ರೈ:** ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರೂ ಆಗಿರುವ ಅಶೋಕ್ ಕುಮಾರ್ ರೈಯವರ ನೇತೃತ್ವದಲ್ಲಿ ನಿರಂತರ 11 ವರ್ಷಗಳಿಂದ ದೀಪಾವಳಿ ಹಬ್ಬದ ಪ್ರಯುಕ್ತ ನಡೆಯುತ್ತಿರುವ ವಸ್ತ್ರದಾನ ಕಾರ್ಯಕ್ರಮದ ಸರಳ ಸಭಾ ಕಾರ್ಯಕ್ರಮದ ವೇದಿಕೆಯಲ್ಲಿ ಅಶೋಕ್ ರೈಯವರ ತಾಯಿ ಗಿರಿಜಾ ಎಸ್. ರೈ, ಸಹೋದರರೂ ಖ್ಯಾತ ಉದ್ಯಮಿಗಳೂ ಆದ ಸುಬ್ರಹ್ಮಣ್ಯ ರೈ, ರಾಜ್‌ಕುಮಾರ್ ರೈ, ಅಕ್ಕಂದಿರಾದ ವಿಶಾಲಾಕ್ಷಿ ಶೆಟ್ಟಿ, ನಳಿನಿ ಶೆಟ್ಟಿ, ಅತ್ತಿಗೆಯಂದಿರಾದ ವಿನಯಾ ಎಸ್.ರೈ, ಪ್ರೀತಿ ಆರ್. ರೈ, ಪತ್ನಿ ಸುಮಾ ಎ. ರೈ, ಮಕ್ಕಳಾದ ಶೃಧಿ ರೈ, ರಿಧಿ ರೈ, ಪ್ರಧಿಲ್ ರೈ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಟ್ರಸ್ಟ್‌ನ ಮುಖ್ಯ ಪ್ರವರ್ತಕರೂ ಆದ ಅಶೋಕ್ ಕುಮಾರ್ ರೈಯವರು, ಕಷ್ಟದಲ್ಲಿರುವವರನ್ನು ಮೇಲಕ್ಕೆತ್ತಿ ಸಾಮಾಜಿಕವಾಗಿ ಅವರೂ ಸಮಾನತೆಯಿಂದ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳಬೇಕೆಂಬ ನಿಟ್ಟಿನಲ್ಲಿ ಟ್ರಸ್ಟ್ ವತಿಯಿಂದ ಅನೇಕ ಯೋಜನೆಗಳನ್ನು ಇರಿಸಿಕೊಳ್ಳಲಾಗಿದೆ. ನನ್ನ ತಂದೆ ಹಾಗೂ ತಾಯಿ ಆರಂಭಿಸಿದ ವಸ್ತ್ರದಾನ ಕಾರ್ಯಕ್ರಮವನ್ನು ಅವರ ಆಶೀರ್ವಾದದೊಂದಿಗೆ ಮುಂದುವರಿಸುತ್ತಿದ್ದೇನೆ ಎಂದರು. ಜನರ ಪ್ರೀತಿ ಸಹಕಾರ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಜನರ ಸೇವೆ ಮಾಡಲು ಸದಾ ಸಿದ್ದನಿದ್ದೇನೆ' ಎಂದ ಅವರು, ನನ್ನ ತಂದೆ ಸಂಜೀವ ರೈ ಮತ್ತು ತಾಯಿ ಗಿರಿಜಾ ಎಸ್. ರೈಯವರು ಬಹಳ ಹಿಂದಿನಿಂದಲೇ ದೀಪಾವಳಿ ಸಂದರ್ಭ ಸುಮಾರು 75 ಮಂದಿಗೆ ವಸ್ತ್ರ ದಾನ ಮಾಡುತ್ತಿದ್ದರು. ಇದೇ ಸೇವಾ ಕಾರ್ಯವನ್ನು ತಾನು ಮುಂದುವರಿಸಿಕೊಂಡು ಬಂದಿದ್ದೇನೆ, ಇಂದು 25 ಲಕ್ಷ ರೂಪಾಯಿ ಖರ್ಚು ಮಾಡಿ 12 ಸಾವಿರಕ್ಕಿಂತಲೂ ಅಧಿಕ ಮಂದಿಗೆ ವಸ್ತ್ರದಾನ ಮಾಡಲಾಗುತ್ತಿದೆ. ಕಳೆದ 10 ವರ್ಷಗಳಿಂದ ಈ ಸೇವೆ ಮಾಡಲಾಗುತ್ತಿದೆ ಎಂದರು. ಮಂಗಳೂರಿನಲ್ಲಿ ಏಡ್ಸ್ ಪೀಡಿತ ಮಕ್ಕಳಿಗೆ ನಿರಂತರ ಶಿಕ್ಷಣ ಮತ್ತು ಊಟ ವಸತಿಯ ವ್ಯವಸ್ಥೆ ಮಾಡಲಾಗುತ್ತಿದೆ,